**ದಿನಾಂಕಃ 19.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು : ಎದುರುದಾರ ಪರ ಎಮ್ ಕೆ ವಕೀಲರಿಂದಃ**

ನಾನು ನನ್ನ ಗಂಡ 5 ತಿಂಗಳು ಸಂಸಾರ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ 1 ವರ್ಷ ಸಂಸಾರ ಮಾಡಿದ್ದೇವೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಅಂತ ನನಗೆ ಗೊತ್ತಿಲ್ಲ. ನಮ್ಮ ವಕೀಲರು ಬರೆದು ಹಾಕಿರುತ್ತಾರೆ. ನಾನು ನನ್ನ ಗಂಡ 5 ತಿಂಗಳು ಸಂಸಾರ ಮಾಡಿದ್ದರು ಸಹ 1 ವರ್ಷ ಮಾಡಿದ್ದೇನೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 3 ವರ್ಷಗಳ ಹಿಂದೆ ಗರ್ಭಪಾತವಾಗಿದೆ. ಮದುವೆಯಾದ 6 ತಿಂಗಳ ನಂತರ ಗರ್ಭಪಾತವಾಗಿದೆ. ಆ ನಂತರ ನಾನು ಗಂಡನ ಮನೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮಾವನಿಗೆ 6 ಜನ ಮಕ್ಕಳು. ಇವರಲ್ಲಿ ಒಬ್ಬ ಮಗ ಮಾತ್ರ ಮದುವೆಯಾಗುವವನಿದ್ದು ಇನ್ನೂಳಿದವರ ಮದುವೆಯಾಗಿದೆ. ನನ್ನ ಗಂಡನೇ ಅವರ ಹಿರಿಯ ಮಗ ಎಂದರೆ ಸರಿ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಾನೆ. ನಮ್ಮ ಮಾವನ ಜಮೀನು ಎಂಟುವರೆ ಎಕರೆ ಇದೆ. ಈ ಜಮೀನು ನಮ್ಮ ಮಾವನ ತಂದೆಯವರ ಹೆಸರಿನಲ್ಲಿ ಇದೆ. ಆತನ ಹೆಸರು ಹಣಮಂತ್ರಾಯ. ನಮ್ಮ ಮಾವನಿಗೆ 3 ಜನ ಸಹೋದರಿಯರು ಇರುತ್ತಾರೆ. ನನ್ನ ಮಾವನಿಗೆ ಇದರಲ್ಲಿ 1 ಎಕರೆ ಜಮೀನು ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ಹಳ್ಳಿಯಲ್ಲಿ ಕೂಲಿಕೆಲಸಕ್ಕೆ ಗಂಡು ಮಕ್ಕಳಿಗೆ 300/- ರೂ. ಗಳು ಕೂಲಿಕೊಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ 500/- ರೂ. ಗಳು ಕೂಲಿ ಕೊಡುತ್ತಾರೆ. ಕೆಲಸಕ್ಕೆ ಹೋದರೆ ಮಾತ್ರ ಕೂಲಿ ಕೊಡುತ್ತಾರೆ ಎಂದರೆ ಸರಿ. ನನ್ನ ಗಂಡನಿಗೆ ಯಾವುದೇ ಜಮೀನು ಇರುವುದಿಲ್ಲ ಹಾಗೂ ಆತನಿಗೆ ಹೊಟ್ಟೆ ನೋವು ಇದೆ ಎಂದರೆ ಸರಿಯಲ್ಲ. ಎದುರುದಾರನು 2 ಲಕ್ಷ ರೂ. ಹಣ, 5 ತೋಲೆ ಬಂಗಾರ ಕೇಳಿರುತ್ತಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರನಿಗೆ ಬೇರೆ ಮನೆ ಮಾಡೋಣ ಅಂತ ಹೇಳಿದಾಗ ಆತನು ಒಪ್ಪದ ಕಾರಣ ನಾನೇ ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನು ದೊಡ್ಡ ಮಗನಿರುವುದರಿಂದ ಆತನೇ ಮನೆತನದ ಜವಾಬ್ದಾರಿ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಎದುರುದಾರನು ಯಾವುದೇ ದುಶ್ಚಟಗಳನ್ನು ಹೊಂದಿರುವುದಿಲ್ಲ ಹಾಗೂ ನಾನು ಇಂದೇ ಬಂದರೆ

ಕರೆದುಕೊಂಡು ಹೋಗಲು ಸಿದ್ದನಿದ್ದಾನೆ ಎಂದರೆ ಸರಿಯಲ್ಲ.

ಎದುರುದಾರನು ನನ್ನ ವಿರುದ್ದ ದಾಂಪತ್ಯ ಹಕ್ಕುಗಳ ಪುನರ್ ಪ್ರಾಪ್ತಿಗಾಗಿ ಪ್ರಕರಣದ ದಾಖಲಿಸಿದ್ದನು ಎಂದರೆ ಸರಿ. ಆತನು ನನ್ನನ್ನು ಬಾ ಎಂದು ಕರೆದರು ನಾನು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಅನೈತಿಕ ಸಂಬಂಧ ಹೊಂದಿದ್ದೇನೆ ಅಂತ ಎದುರುದಾರನಿಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಎದುರುದಾರನು ನನ್ನನ್ನು ಹೊಡೆದು ಪೋಲಿಸ ಠಾಣೆಯಲ್ಲಿ ಕೇಸು ಮಾಡಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ನನ್ನನ್ನು ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.